ದಿನಾಂಕ 09-07-2019 ರಂದು ಪುನಃ ಸಾಕ್ಷಿಗೆ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಜೆ.ವಿ.ಹೆಚ್ ವಕೀಲರಿಂದ.**

ನಮ್ಮ ಕುಟುಂಬಕ್ಕೆ ಸೇರಿದ ಚಿತ್ತಾಪೂರ ತಾಲೂಕಿನ ಕಂದನೂರು ಗ್ರಾಮದಲ್ಲಿದ್ದ ಜಮೀನಿನ ಸರ್ವೆ ನಂಬರ 125 ಇದೆ ಎಂದರೆ ಸರಿ. ಸದರಿ ಸರ್ವೆ ನಂಬರ 125 ಮೊದಲು ನನ್ನ ತಂದೆಯ ಹೆಸರಿನಲ್ಲಿತ್ತು ನಂತರ ಅದರಲ್ಲಿರುವ ಜಮೀನು ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ಮಧ್ಯೆ ತಲಾ ಅರ್ಧ ಭಾಗ ಎಂದು ವಿಭಾಗ ಆಗಿದೆ ಎಂದರೆ ಸರಿ. ಸದರಿ ವಿಭಾಗ ಆದ ನಂತರ ನನ್ನ ತಂದೆ ಮತ್ತು ನಮ್ಮ ಕಾಕ ತಮ್ಮ ಪಾಲಿಗೆ ಬಂದ ಜಮೀನನ್ನು ತಮ್ಮ ಹೆಸರಿನಲ್ಲಿ ಮಾಡಿಕೊಂಡು ಅವರ ಜಮೀನಿನ ಸ್ವಾಧೀನತೆಯಲ್ಲಿದ್ದರು ಎಂದರೆ ಸರಿ. ನಾವು ಮತ್ತು ನಮ್ಮ ತಂದೆ ನಮ್ಮ ಜಮೀನಿನ ಸಾಗುವಳಿ ಮಾಡುತ್ತ ಕಂದನೂರು ಗ್ರಾಮದಲ್ಲಿ ವಾಸ ಮಾಡುತ್ತಿದ್ದೇವು ಎಂದರೆ ಸರಿ. ಮಶಾಕ್ ಪಟೇಲ್ ತನ್ನ ಪಾಲಿಗೆ ಬಂದ ಜಮೀನನ್ನು ಸಾಗುವಳಿ ಮಾಡುತ್ತಿದ್ದ ಎಂದರೆ ಸರಿ, ಸಾಕ್ಷಿದಾರರು ಮುಂದುವರೆದು ನನ್ನ ಪಾಲಿಗೆ ಬಂದ ಜಮೀನನ್ನು ನಾನು ಸಾಗುವಳಿ ಮಾಡುತ್ತಿದ್ದೇನೆ ಎನ್ನುತ್ತಾರೆ. ನಮ್ಮ ಪಾಲಿಗೆ ಬಂದ ಜಮೀನಿನ ಎಲ್ಲಾ ಪಹಣಿ ಪತ್ರಿಕೆಗಳನ್ನು ನಾನು ನೋಡಿದ್ದೇನೆ. ನಾವು ಕಂದನೂರು ಗ್ರಾಮದಲ್ಲಿ ವಾಸ ಮಾಡುತ್ತಿದ್ದರೂ ಸಹಿತ ಬಣಮಿ ಗ್ರಾಮಕ್ಕೆ ಆಗಾಗ ಬಂದು ಹೋಗುತ್ತಿದ್ದೇವು. ನಮ್ಮ ಅಪ್ಪ ಸತ್ತ ನಂತರ ಪ್ರತಿವರ್ಷ ನಾನು ಪಹಣಿ ತೆಗೆಸಿ ನೋಡಿಲ್ಲ. ನಾನಾಗಲೀ, ನನ್ನ ತಾಯಿಯಾಗಲೀ ದಾವಾ ಆಸ್ತಿಯನ್ನು ನಮ್ಮ ಹೆಸರಿನಲ್ಲಿ ಮಾಡಿಕೊಳ್ಳಲು ಯಾವುದೇ ಅರ್ಜಿ ಸಲ್ಲಿಸಿಲ್ಲ, ಸಾಕ್ಷಿದಾರರು ಮುಂದುವರೆದು ನಾವು ನಮ್ಮ ಹೆಸರಿನಲ್ಲಿ ಮಾಡಿಕೊಳ್ಳುವಾಗ ದಾವಾ ಆಸ್ತಿಯು ನಮ್ಮ ಹೆಸರಿನಲ್ಲಿ ಇಲ್ಲ ಎಂದು ಗೊತ್ತಾಗಿರುತ್ತದೆ. ನಮ್ಮ ತಂದೆ 1970 ಅಥವಾ 1971 ನೇ ಇಸವಿಯಲ್ಲಿ ಸತ್ತಿದ್ದಾರೆ. 1970 ನೇ ಇಸವಿಯಿಂದ ಈ ದಾವೆ ಸಲ್ಲಿಸುವವರೆಗೆ ನಾನು ದಾವಾ ಆಸ್ತಿಯ ಪಹಣಿ ಪತ್ರಿಕೆಗಳನ್ನು ನೋಡಿಲ್ಲ ಏಕೆಂದರೆ ದಾವಾ ಆಸ್ತಿಗಳು ನಮ್ಮ ತಂದೆಯ ಹೆಸರಿನಲ್ಲಿ ಇರಬಹುದೆಂದು ನಾನು ತಿಳಿದುಕೊಂಡಿದ್ದೇನೆ. 1982 ನೇ ಇಸವಿಯಲ್ಲಿ ಸರ್ವೆ ನಂಬರ 125 ರಲ್ಲಿರುವ ಜಮೀನನ್ನು ನಮ್ಮ ತಾಯಿಯ ಹೆಸರಿನಲ್ಲಿ ಮಾಡಿಸಿದ್ದೇವೆ ಎಂದರೆ ಸರಿ. 1982 ನೇ ಇಸವಿಯಲ್ಲಿ ದಾವಾ ಆಸ್ತಿಯನ್ನು ನಮ್ಮ ಹೆಸರಿನಲ್ಲಿ ಮಾಡಿಕೊಳ್ಳಲು ನಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. 6 ವರ್ಷಗಳ ಹಿಂದೆ ನನ್ನ ತಾಯಿ ತೀರಿಕೊಂಡಿದ್ದಾಳೆ. ನಮಗೆ ಮೂವರು ಅಕ್ಕ-ತಂಗಿಯರಿದ್ದಾರೆ ಅವರ ಹೆಸರು ವಾಹಿದಾಬೀ, ನಸಿನಬೇಗಂ ಮತ್ತು ಶಮೀನಬೇಗಂ. ಈಗ ಅವರೆಲ್ಲರೂ ಜೀವಂತ ಇದ್ದಾರೆ. ನನ್ನ ಸಹೋದರಿಯರು ತಮ್ಮ ಪರವಾಗಿ ಕೇಸು ನಡೆಸಲು ನನಗೆ ಅಧಿಕಾರ ಕೊಟ್ಟಿಲ್ಲ ನನ್ನ ಜಮೀನು ಆಗಿರುವುದರಿಂದ ನಾನು ಈ ದಾವೆ ಸಲ್ಲಿಸಿದ್ದೇನೆ. ದಾವಾ ಆಸ್ತಿಯು ಮಶಾಕ್

ಪಟೇಲ್‌ನ ಪಾಲಿಗೆ ಬಂದಿದೆ ಎಂದು 1983 ನೇ ಇಸವಿಯಲ್ಲಿ ನಾವು 400 ರೂ. ಹಣ ಪಡೆದುಕೊಂಡು ದಾವಾ ಆಸ್ತಿಯ ಮೇಲಿನ ಹಕ್ಕನ್ನು ಒಂದು ರಶೀದಿ ಬರೆದುಕೊಟ್ಟು ಮಶಾಕ್ ಪಟೇಲ್‌ನಿಗೆ ಬಿಟ್ಟು ಕೊಟ್ಟಿದ್ದೇವೆ ಎಂದರೆ ಸರಿ ಅಲ್ಲ. ಸದರಿ ರಶೀದಿಯ ಮೇಲೆ ನಾನು ಮತ್ತು ನನ್ನ ತಾಯಿ ಸಹಿ ಮಾಡಿದ್ದೇವೆ ಎಂದರೆ ಸರಿ ಅಲ್ಲ. ನಾವೇ ಖುದ್ದಾಗಿ ಮಶಾಕ್ ಪಟೇಲ್‌ನ ಹೆಸರಿಗೆ ದಾವಾ ಆಸ್ತಿಯನ್ನು ವರ್ಗಾವಣೆ ಮಾಡಿಸಿದ್ದೇವೆ ಎಂದರೆ ಸರಿ ಅಲ್ಲ. 1983 ನೇ ಇಸವಿಯಿಂದ 1986 ನೇ ಇಸವಿಯವರೆಗೆ ದಾವಾ ಆಸ್ತಿಯು ಮಶಾಕ್ ಪಟೇಲ್‌ನ ಹೆಸರಿನಲ್ಲಿ ಇತ್ತು ಎಂದರೆ ಸರಿ ಅಲ್ಲ. ನಂತರ ರಾಜಾ ಪಟೇಲ್ ಮತ್ತು ಸಾಹೇಬ ಪಟೇಲ್ ದಾವಾ ಆಸ್ತಿಯನ್ನು ತಮ್ಮ ಮಧ್ಯೆ ಅರ್ಧರ್ಧ ಪಾಲನ್ನು ಹಂಚಿಕೊಂಡಿದ್ದಾರೆ ಎಂದರೆ ಸರಿ ಅಲ್ಲ. ಮಶಾಕ ಪಟೇಲ್ ತಂದೆ ಮಹ್ಮದ್ ಪಟೇಲ್ ನನ್ನ ತಾಯಿಗೆ ತಮ್ಮನಾಗಬೇಕು ಎಂದರೆ ಸರಿ. ಸದರಿ ಮಶಾಕ್ ಪಟೇಲ್ ಕೂಡ ರಶೀದಿಯ ಮೇಲೆ ಸಹಿ ಮಾಡಿದ್ದಾನೆ ಎಂದರೆ ಸರಿ ಅಲ್ಲ. ನಾವು ಒಪ್ಪಿಕೊಂಡು ದಾವಾ ಆಸ್ತಿಯನ್ನು ಪ್ರತಿವಾದಿಯರಿಗೆ ಬಿಟ್ಟ ನಂತರ ಪ್ರತಿವಾದಿಯರೇ ದಾವಾ ಆಸ್ತಿಯ ಕಬ್ಜೆಯಲ್ಲಿದ್ದಾರೆ ಎಂದರೆ ಸರಿ ಅಲ್ಲ. ನಂತರ ಪ್ರತಿವಾದಿಯರ ಹೆಸರಿನಲ್ಲಿ ದಾವಾ ಆಸ್ತಿಯ ಫಾರ್ಮ ನಂಬರ 10 ಆಗಿದೆ ಎಂದರೆ ಸರಿ ಅಲ್ಲ. 1986 ನೇ ಇಸವಿಯಿಂದ ಪ್ರತಿವಾದಿಯರೇ ದಾವಾ ಆಸ್ತಿಯ ಮಾಲೀಕರಾಗಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿಯರಿಗೆ ಬಿಟ್ಟು ಕೊಟ್ಟಿರುವುದರಿಂದ 2015 ನೇ ಇಸವಿಯವರೆಗೆ ನಾವು ಯಾವುದೇ ಕಾರವಾಯಿ ಮಾಡಿಲ್ಲ ಎಂದರೆ ಸರಿ ಅಲ್ಲ. ನಾವು ದಾವಾ ಆಸ್ತಿಯ ಮಾಲೀಕ ಮತ್ತು ಸ್ವಾಧಿನತೆಯಲ್ಲಿ ಇಲ್ಲದಿದ್ದರೂ ಸಹಿತ ಸುಳ್ಳು ಶಪಥಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. 1986 ನೇ ಇಸವಿಯಿಂದ ಇಲ್ಲಿಯವರೆಗೆ ಪ್ರತಿವಾದಿಯರೇ ದಾವಾ ಆಸ್ತಿಯ ಕಂದಾಯ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿ ಅಲ್ಲ. ನಾವು ಮತ್ತು ವಾದಿಯರು ಕಂದಾಯ ಪಾವತಿ ಮಾಡಿದ್ದೇವೆ ಆ ಕಂದಾಯ ರಶೀದಿಗಳು ನಮ್ಮ ಬಳಿ ಇವೆ. ನಮಗೆ ಆ ಕಂದಾಯ ರಶೀದಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಯಾವುದೇ ತೊಂದರೆ ಇಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇರುತ್ತದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ